ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ ಒಂದು ವಿಷಯ. ರಾಜ್ಯಸಭೆಯಲ್ಲಿ ಛೇರ್ಮನ್ ಆಗಿರತಕ್ಕವರು....

ಅಧ್ಯಕ್ಷರು.—ನೀವು ಯಾವುದರ ಬಗ್ಗೆ ಹೇಳುತ್ತಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳುತ್ತೇನೆ, ತಾವು ಕೇಳಿ. ರಾಜ್ಯಸಭೆಯಲ್ಲಿ ಛೇರ್ಮನ್ ಆಗಿರತಕ್ಕ ಮಾನ್ಯ ವೆಂಕಟರಾಮನ್‌ರವರು ಒಂದು ರೂಲಿಂಗ್ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಆವರವರ ಖಾತೆಗೆ ಸಂಬಂಧಪಟ್ಟ ವಿಷಯಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ಅವರು ಇಲ್ಲದಿದ್ದರೆ ಅಧ್ಯಕ್ಷರಿಗೆ ಕಾಗದ ಬರೆದು ತಿಳಿಸಬೇಕು. ಆ ರೀತಿ ಮಾಡಿರದಿದ್ದರೆ ಸಭೆಗೆ ಅಗೌರವ ತೋರಿಸಿದಂತಾಗುತ್ತದೆಂದು ಹೇಳಿದ್ದಾರೆ.

ಅಧ್ಯಕ್ಷರು.—ನಾನು ಕೂಡ ಪತ್ರಿಕೆಯಲ್ಲಿ ಅದನ್ನು ಓದಿದ್ದೇನೆ. ಆ ಪ್ರಕಾರವೇ ಹೇಳುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯೊನ್ನೊಪ್ಪಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸದನವು ಈ ವರದಿಯನ್ನು ಒಪ್ಪುತ್ತದೆಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಮನವಿಯನ್ನೊಪ್ಪಿಸುವುದು

ಶ್ರೀ ಬಸವರಾಜ್.—ಅಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ತಾಲ್ಲೂಕಿನ ಪೆರ್ಡೂರು ಗ್ರಾಮಕ್ಕೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಬಗ್ಗೆ ಮನವಿಯನ್ನು ಈ ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಲಾಯಿತು.

| ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಬಗ್ಗೆ ಗಮನ ಸೆಳೆಯಂವ ಸೂಚನೆಗಳು

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ರಾಜ್ಯಾದ್ಯಂತ ಅದರಲ್ಲೂ ವಿಶೇಷವಾಗಿ ಕೋಲಾರ, ಬೀದರ್, ಮೈಸೂರು ಹಾಗೂ ಇತರೆ ಜಿಲ್ಲೆಗಳಲ್ಲಿ ಈ ವರ್ಷವೂ ಬರಗಾಲ ಪರಿಸ್ಥಿತಿ ಮುಂದುವರಿದಿರುವುದರಿಂದ ಜನ ಹಾಗೂ ಜಾನುವಾರುಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಬರಗಾಲದ ವಿಚಾರದಲ್ಲಿ ವಿವರವಾದಂಥ ಹೇಳಿಕೆಯನ್ನು ನಾನು ಸೋಮವಾರ ಕೊಡುತ್ತೇನೆ. ಈಗ ಕೊಡಲಿಕ್ಕೆ ಹೋದರೆ ಅರ್ಧಂಬರ್ಧ ಆಗುತ್ತದೆ. ಎಲ್ಲಾ ಜಿಲ್ಲಾಧಿಕಾರಿಗಳಿಂದ ವರದಿ ಬರುತ್ತಿದೆ. ಆದ್ದರಿಂದ ಸೋಮವಾರ ಕೊಡುತ್ತೇನೆ.

|| ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ಅಧ್ಯಾಪಕರನ್ನು ತೆಗೆದುಹಾಕಿರುವುದು

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ ೭-೮ ವರ್ಷಗಳಿಂದ ಕೆಲಸ ಮಾಡುತ್ತಿದ್ದ ಹಂಗಾಮಿ ಅಧ್ಯಾಪಕರನ್ನು ಇತ್ತೀಚೆಗೆ ಕೆಲಸದಿಂದ ತೆಗೆದು ಹಾಕಿರುವುದರಿಂದ, ಉಂಟಾಗಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ವಿದ್ಯಾಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಹಂಗಾಮಿ

ಅಧ್ಯಾಪಕರನ್ನು ಇತ್ತೀಚೆಗೆ ವಿಶ್ವವಿದ್ಯಾನಿಲಯದ ಸಂದರ್ಶನದ ಮೂಲಕ ನೇಮಕ ಮಾಡಿಕೊಳ್ಳಲಾಗುತ್ತಿದೆ. ಕಳೆದ ವರ್ಷ ಇದ್ದ ೧೮ ಜನ ಹೆಂಗಾಮಿ ಅಧ್ಯಾಪಕರಲ್ಲಿ ೧೪ ಜನರನ್ನು ಈ ಸಂದರ್ಶನಾನಂತರ ನೇಮಕ ಮಾಡಿಕೊಂಡಿರುತ್ತದೆ. ಉಳಿದ ನಾಲ್ಕು ಜನರು ಪ್ರಥಮ ದರ್ಜೆಯ ಪದವಿಯನ್ನು ಹೊಂದಿಲ್ಲದೇ ಇದ್ದುದರಿಂದ ಅವರನ್ನು ನೇಮಕಾತಿ ಮಾಡಲಾಗಲಿಲ್ಲ. ಈ ಉಳಿದ ನಾಲ್ಕು ಹುದ್ದೆಗಳಿಗೆ ಹೊಸದಾಗಿ ನಾಲ್ಕು ಜನ ಅಧ್ಯಾಪಕರನ್ನು ನೇಮಕಾತಿ ಮಾಡಲಾಗಿದೆ. ಈ ನಾಲ್ಕು ಜನರೂ ಪ್ರಥಮ ದರ್ಜೆ ಪದವೀಧರರು ಆಗಿಲ್ಲದಿದ್ದರೂ ಇವರಲ್ಲಿ ಮೂರು ಜನ ಪರಿಶಿಷ್ಟ ಜಾತಿಗೆ ಸೇರಿದವರಾದ್ದರಿಂದ ಇವರನ್ನು ನೇಮಕ ಮಾಡಿಕೊಳ್ಳಲಾಯಿತು. ಹೀಗಿದ್ದರೂ ನೇಮಕ ಗೊಳ್ಳದೆ ಉಳಿದ ನಾಲ್ಕರಲ್ಲಿ ಒಬ್ಬರನ್ನು ಈಗಾಗಲೇ ಹೊಸದಾಗಿ ವರ್ಕ್ ಲೋಡ್ ಕಾರಣದಿಂದಾಗಿ ಸೃಷ್ಟಿಸಲಾದ ಹೆಂಗಾಮಿ ಅಧ್ಯಾಪಕ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದೆ. ಈ ವಿಷಯದಲ್ಲಿ ಪುನಃ ಮೈಸೂರು ವಿಶ್ವ ವಿದ್ಯಾಲಯದ ಉಪ ಕುಲಪತಿಗಳೊಂದಿಗೆ ಸಮಾಲೋಚಿಸಿ, ಅನ್ಯಾಯವಾಗಿದ್ದರೆ, ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಲಾಗುವುದು.

ಶ್ರೀ ವೇದಾಂತ ಹೆಮ್ಮಿಗೆ.—ಈಗ ಸಚಿವರು ತಪ್ಪು ಉತ್ತರದಲ್ಲಿ ಪರಿಶಿಷ್ಟ ವರ್ಗದವರನ್ನು ನೇಮಿಸಿಕೊಳ್ಳಲಾಗಿದೆ ಎಂದು ಹೇಳಿದರು. ಕೆಲವೊಂದು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕಾಗಿದೆ. ಈರಯ್ಯ ಎನ್ನುವವರು ೮ ವರ್ಷಗಳ ಕಾಲ ಕೆಲಸ ಮಾಡಿದರು. ಅವರು ಪರಿಶಿಷ್ಟ ವರ್ಗಕ್ಕೆ ಸೇರಿದವರು. ೫೬ ಪರ್ಸೆಂಟ್ ಆ ಜಾಗದಲ್ಲಿ ಬಿ. ನಾಗರಾಜಯ್ಯ ಎಂದು ಅಪಾಯಿಂಟ್‌ಮೆಂಟ್ ಮಾಡಿದ್ದಾರೆ ೫೪ ಪರ್ಸೆಂಟ್ ಅವರಿಗೆ ಟೀಚಿಂಗ್ ಎಕ್ಸ್‌ಪೀರಿಯನ್ಸ್ ಇಲ್ಲ ಎರಡನೆಯದು ಮಹಲಿಂಗಯ್ಯ ೫೩ ಪರ್‌ಸೆಂಟ್, ಹಿಂದೆ ಇದ್ದವರಿಗೆ ಸುಮಾರು ೭-೮ ವರ್ಷ ಎಕ್ಸ್‌ಪೀರಿಯೆನ್ಸ್ ಇತ್ತು, ಇವರಿಗೆ ಎಕ್ಸ್‌ಪೀರಿಯೆನ್ಸ್ ಇಲ್ಲ. ಹೆಚ್. ಎಮ್. ಸಿದ್ದಲಿಂಗಮೂರ್ತಿ, ಷೆಡ್ಯೂಲ್‌ಕ್ಯಾಸ್ಟ್ ೫೦ ಪರ್‌ಸೆಂಟ್, ಹಿಂದೆ ಇದ್ದವರು ೫೫ ಪರ್‌ಸೆಂಟ್. ಆದರೆ ಇವರಿಗೆ ಶಿಕ್ಷಣದ ಅನುಭವ ಇಲ್ಲ. ಹಿಂದೆ ಇದ್ದವರು ೭-೮ ವರ್ಷ ಕೆಲಸ ಮಾಡಿದ್ದರು. ಇದನ್ನೆಲ್ಲಾ ನೋಡಿದರೆ ಈ ಜಾಗಗಳಿಗೆ ಯಾವರೀತಿ ಹೊಸಬರನ್ನು ಅಪಾಯಿಂಟ್‌ಮೆಂಟ್ ಮಾಡಿದರೋ ಅರ್ಥವಾಗುತ್ತಿಲ್ಲ. ನಾನು ಸಚಿವರ ಗಮನಕ್ಕೆ ಇನ್ನಷ್ಟು ಬೆಳಕನ್ನು ಚೆಲ್ಲಲಿಕ್ಕೆ ಇಷ್ಟಪಡುತ್ತೇನೆ, ಒಟ್ಟು ೨೯ ಜನರಲ್ಲಿ ಫಸ್ಟ್‌ರ‍್ಯಾಂಕ್ ಬಂದವರು ಒಬ್ಬರು, ಸೆಕೆಂಡ್ ರ‍್ಯಾಂಕ್ ಬಂದವರು ಒಬ್ಬರು, ಫಸ್ಟ್‌ಕ್ಲಾಸ್ ಒಂಬತ್ತು, ಸೆಕೆಂಡ್‌ಕ್ಲಾಸ್ ೮, ಇತರರು ೬, ಪೆಡ್ಯೂಲ್ ಕ್ಯಾಸ್ಟ್ ೬, ಸುಮಾರು ೧೫ ವರ್ಷದಿಂದ ಕೆಲಸ ಮಾಡಿದವರು ೨, ೧೨ ವರ್ಷದಿಂದ ಕೆಲಸ ಮಾಡಿದವರು ೪, ೮ ವರ್ಷದಿಂದ ಕೆಲಸ ಮಾಡಿದವರು ೪, ೭ ವರ್ಷದಿಂದ ಕೆಲಸ ಮಾಡಿದವರು ೪, ೫ ವರ್ಷದಿಂದ ಕೆಲಸ ಮಾಡಿದವರು ೪, ನಾಲ್ಕು ವರ್ಷದಿಂದ ಕೆಲಸ ಮಾಡಿದವರು ೮ ಮಂದಿ. ಈ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ನಾನು ಶಿಕ್ಷಣ ಸಚಿವರಲ್ಲಿ ಒಂದು ಮಾತನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇವರು ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಆರ್ಜಿಗಳನ್ನು ಕರೆದು ಭರ್ತಿ ಮಾಡುವಾಗ ಹೆಚ್ಚಿನ ಅನುಭವ ಹೊಂದಿರುವಂಥವರನ್ನು, ೧೫ ವರ್ಷಗಳ ಕಾಲ ಯಾರು ದುಡಿದಿದ್ದಾರೆ ಅವರನ್ನು ಭರ್ತಿ ಮಾಡದೆ, ಯಾರು ಯಾರನ್ನೋ ತೆಗೆದುಕೊಂಡಿದ್ದಾರೆ. ಅಪ್ಲಿಕೇಷನ್ಸ್ ಕರೆದು ಇವರನ್ನು ಯಾವ ರೀತಿ ಪರ್‌ಮನೆಂಟ್ ಮಾಡಿದರು. ನಾನು ಕಳೆದ ಅಧಿವೇಶನದಲ್ಲಿ ವಿಶ್ವವಿದ್ಯಾನಿಲಯದ ಬಿಲ್ ತಂದಾಗ ಮಾತನಾಡುತ್ತಾ, ಸಿಂಡಿಕೇಟ್ ಮೆಂಬರ್ ಸೆನೆಟ್‌ಮೆಂಬರ್‌ಯಾರು ಯಾರದೋ ಪ್ರಭಾವಕ್ಕೆ ಒಳಗಾಗಿ ಯಾರು ಯಾರನ್ನೋ ಅಪಾಯಿಂಟ್‌ಮೆಂಟ್ ಮಾಡುತ್ತಾರೆ, ಅಧಿಕೃತವಾಗಿ ಆಪಾಯಿಂಟ್‌ಮೆಂಟ್ ಮಾಡುವಾಗ, ಯಾರು ಸೇವೆ ಸಲ್ಲಿಸಿರುವವರು ಇರುತ್ತಾರೆ, ಯಾರು ವಿದ್ಯಾರ್ಹತೆಯನ್ನು ಹೊಂದಿರುತ್ತಾರೆ ಆ ಅರ್ಹತೆಯ ಮೇಲೆ ತೆಗೆದುಕೊಳ್ಳಬೇಕೆಂದು ಮಾಡಿ ಎಂದು ಹೇಳಿದ್ದೆ. ಈ ಅಪಾಯಿಂಟ್‌ಮೆಂಟ್ ವಿಚಾರದಲ್ಲಿ ಸಂಘದವರು ಕುಲಪತಿಯವರ ಹತ್ತಿರ ಮಾತುಕತೆ ನಡೆಸಿದ್ದಾರೆ. ಅವರು ನಾವು ಆ ರೀತಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾತುಕತೆ ನಡೆದರೂ ಸಹ, ಯಾವ ಅಧ್ಯಾಪಕರು ಸೇವೆಯನ್ನು ಸಲ್ಲಿಸಿದ್ದಾರೆ ಅವರನ್ನು ತೆಗೆದುಕೊಂಡಿಲ್ಲ, ಒಂದು ಆಶ್ಚರ್ಯವಾದ ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಾವ ಅಧ್ಯಾಪಕರು ವಿದ್ಯಾರ್ಥಿಯನ್ನು ತಯಾರು ಮಾಡಿದ್ದರೋ, ಆ ವಿದ್ಯಾರ್ಥಿಗೆ ಇವೊತ್ತು ಕೆಲಸ ಸಿಕ್ಕಿದೆ. ಆ ಅಧ್ಯಾಪಕರು ಮನೆಗೆ ಹೋಗಿದ್ದಾರೆ ನನ್ನ ಹತ್ತಿರ ಆ ಮಾಹಿತಿ ಇಲ್ಲ ಅದನ್ನು ನಾನು ಕೊಡುತ್ತೇನೆ. ವಿಶ್ವವಿದ್ಯಾನಿಲಯದಲ್ಲಿ ಪಾಠ ಹೇಳಿಕೊಟ್ಟಂಥ ಗುರು ಮನೆಗೆ ಹೋಗಿದ್ದಾರೆ ಆತನ ಹತ್ತಿರ ಪಾಠ ಕಲಿತಂಥವರು ಅಧ್ಯಾಪಕರಾಗಿ ಬಂದಿದ್ದಾರೆ. ಶ್ರೀ ರಾಧಾಕೃಷ್ಣನ್, ಶ್ರೀ ಕುವೆಂಪು, ಶ್ರೀ ಸರದಾರ್ ಪಣಿಕರ್, ಇಂಥ ಶಿಲ್ಪಿಗಳು ಕಟ್ಟಿದ ವಿಶ್ವವಿದ್ಯಾನಿಲಯ ಇದು. ಇದು ಮಾದರಿ ವಿಶ್ವವಿದ್ಯಾನಿಲಯವಾಗಬೇಕು. ಇದರಲ್ಲಿ ಶಿಕ್ಷಕರಿಗೆ ದ್ರೋಹ ಆಗಬಾರದು. ಈ ದೃಷ್ಟಿಯಿಂದ ಇದನ್ನು ನಮ್ಮ ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಚಿವರಿಗೆ ಶಿಕ್ಷಣದ ಬಗ್ಗೆ ಕಾಳಜಿ

ಇದೆ. ಅವರು ಹಿಂದೆ ಕಾರ್ಮಿಕ ಮಂತ್ರಿಗಳಾಗಿದ್ದವರು. ಯಾರು ದುಡಿಮೆ ಮಾಡುತ್ತಾರೆ ಅವರಿಗೆ ಕಾಳಜಿ ಇದೆ ಎಂದು ತಿಳಿದುಕೊಂಡಿದ್ದೇನೆ. ಈಗ ಎಷ್ಟು ಜನ ಹಂಗಾಮಿಯಲ್ಲಿ ಇದ್ದಾರೆ ಅವರಿಗೆ ಪರ್‌ಮನೆಂಟ್ ಮಾಡಬೇಕು.

ಶ್ರೀ ಡಿ. ಮಂಜುನಾಥ್.—ವಿಶ್ವವಿದ್ಯಾನಿಲಯದಲ್ಲಿ ನೇಮಕ ಮಾಡುವ ರೀತಿಯೇ ಬೇರೆ. ಅಲ್ಲಿ ಅರ್ಜಿಗಳನ್ನು ಕರೆಯುತ್ತಾರೆ. ಬೋರ್ಡ್ ಆಫ್ ಅಪಾಯಿಂಟಿಂಗ್ ಅಥಾರಿಟಿ ಇರುತ್ತದೆ. ಇದು ಅವರು ಮಾಡುವಂಥಾದ್ದು. ಸರ್ಕಾರ ಮಾಡುವಂಥಾದ್ದು ವಿಧಾನವೇ ಬೇರೆ. ಈಗ ಹಂಗಾಮಿಯಾಗಿ ಕೆಲಸ ಮಾಡಿದಂಥ ನಾಲ್ಕು ಜನರಿಗೆ ಮಾತ್ರ ಸಿಕ್ಕಿಲ್ಲ ಅವರಿಗೆ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವೈಸ್‌ಚಾನ್ಸ್‌ಲರ್ ಹತ್ತಿರ ಮಾತನಾಡುತ್ತೇನೆ. ಆ ನಾಲ್ಕು ಜನರಿಗೆ ಅವಕಾಶ ಮಾಡಿಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ಜನೇ ಜುಲೈ ೧೯೮೩ರಲ್ಲಿ ಒಂದು ಆದೇಶ ಹೊರಡಿಸಲಾಗಿದೆ.

> "For purposes of sub-rule (1) the local candidates must be a person appointed as a local candidate to a Group A or Group B or Group C or Group D posts before 5th July 1983 and must be in the service of the State Government as on the date of commencement of these rules."

ಇವೊತ್ತು ಸರ್ಕಾರ ವಿಶ್ವವಿದ್ಯಾನಿಲಯಗಳಿಗೆ ಪೂರ್ಣವಾಗಿ ಅನುದಾನವನ್ನು ಕೊಡುತ್ತಿದೆ. If the Hon. Minister says that these Universities are *autonomous* I cannot agree with him. They are not fully *antonomous* bodies. ಅವರ ಸ್ವಂತ ದುಡ್ಡಿನಿಂದ ಜೀವನ ಮಾಡುತ್ತಿಲ್ಲ. ನಾವು ಹಣವನ್ನು ಕೊಡುತ್ತಿದ್ದೇವೆ. ಸರ್ಕಾರ ಜನೇ ತಾರೀಖು ಹೊರಡಿಸಿದಂಥ ಆದೇಶದ ಮೇರೆಗೆ ಸಿಂಡಿಕೇಟ್‌ನವರು ಅದನ್ನು ಹಾರಿಗೆ ತಂದು ಅವರನ್ನು ಖಾಯಂ ಮಾಡಬೇಕಾಗಿತ್ತು. ಆದರೆ ಅವರು ೧-೮-೧೯೮೬ರಲ್ಲಿ ಒಂದು ರೆಸಲ್ಯೂಷನ್ ಮಾಡಿದ್ದಾರೆ.

> "To address State Government for amendment to KSU Act 1976 to enable the University to extend the benfits of Government Notification No. DPAR 49 SLC 84 (11) dated 2-7-1986 Special Recruitment of Local Candidates."

ಯೂನಿವರ್ಸಿಟಿಯವರು ಆಮೆಂಡ್ ಮಾಡಿ ಎಂದು ಸರ್ಕಾರವನ್ನು ಕೇಳಿಕೊಂಡಿದ್ದಾರೆ. ಈ ಹಣದ ವ್ಯವಸ್ಥೆಯಲ್ಲಿ ನಿಜವಾಗಿ ನಮ್ಮಿಂದಲೇ ಅವರು ಉಳಿದುಕೊಂಡಿರುವುದು. ಇನ್ನು ಜಯರಾಂ ಎಂದು ಬುಡುಬುಡುಕೆಯವರು ೯ ವರ್ಷಗಳ ಕಾಲ ಸೇವೆ ಮಾಡಿದ್ದರು. ಅವರನ್ನು ಕೂಡ ತೆಗೆದು ಹಾಕಿದ್ದಾರೆ. ಈ ಸಭೆಯಲ್ಲಿ ನಾವು ಸರ್ಕಾರದ ಗಮನ ಸೆಳೆದಾಗ ಸಾಕಷ್ಟು ವಿಷಯವನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪಾಪ ಸರ್ಕಾರ ಜೂನ್ ತಿಂಗಳಲ್ಲಿ ಲೋಕಲ್ ಕ್ಯಾಂಡಿಡೇಟ್‌ಗಳನ್ನು ರೆಗ್ಯೂಲರೈಸ್ ಮಾಡಿದಂತೆ ಇವರನ್ನು ಮಾಡಬೇಕೆಂಬುದು ಆಗಿದೆ. ಲೆಕ್ಚರರುಗಳಿಗೆ ಸಂಬಂಧಪಟ್ಟಂತೆ ನೇಮಕಾತಿ ಪದ್ಧತಿ ಬೇರೆ ಇದೆ. ಡಿ. ಗ್ರೂಪ್‌ನವರಿಗೆ ಬೇರೆ ಇದೆ. ನಾನು ಮೈಸೂರಿಗೆ ಹೋಗಿದ್ದಾಗ ಈ ನಾಲ್ಕು ಜನ ಕೂಡ ನನ್ನ ಹತ್ತಿರ ಬಂದಿದ್ದರು. ನಾವುಗಳು ಲೋಕಲ್ ಕ್ಯಾಂಡಿಡೇಟುಗಳಾಗಿ ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ನಮ್ಮನ್ನು ಕೆಲಸದಿಂದ ತೆಗೆದುಹಾಕಿರುವುದರಿಂದ ಬಹಳ ಅನ್ಯಾಯವಾಗಿದೆಯೆಂದೂ ತಿಳಿಸಿದ್ದಾರೆ. ನಾನು ಈ ವಿಚಾರದಲ್ಲಿ ಸಂಬಂಧಪಟ್ಟ ಉಪಕುಲಪತಿಗಳ ಹತ್ತಿರ ಮಾತನಾಡಿ ಇವರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಎಕ್ಸಾಮಿನ್ ಮಾಡಿ ಏಂದು ಹೇಳುತ್ತೇನೆ.

SRI M. MALLIKARJUNA KHARGE.—In all the Universities, the local Recruitment Committees appoint as they like. They won't

maintain roster system. That is why if you go on regularising their services, the SC/ST and backward class people will be affected. I want to know from the Minister what is the policy of the Government in recruitment in all the Universities?

ಶ್ರೀ ಡಿ. ಮಂಜುನಾಥ್.—ವಿಶ್ವವಿದ್ಯಾನಿಲಯಗಳಲ್ಲಿ ಹೊಸಲಾ ಆ ರೀತಿ ನಡೆಯುತ್ತಿತ್ತು. ಈಗ ಜಾಹಿರಾತು ಮಾಡುವಾಗಲೇ ಕ್ಲ್ಯಾರಿಫೈ ಮಾಡಿ ಮಾಡುವುದರಿಂದ ರೋಸ್ಟರ್ ಪದ್ಧತಿಗೆ ತೊಂದರೆಯಾಗಲಾರದೆಂದು ನಾವು ಭಾವಿಸಿದ್ದೇವೆ. ಈಗ ಅವರು ಇಂತಿಂಥ ಖಾಲಿ ಇರತಕ್ಕ ಹುದ್ದೆಗಳು ಇಂತಿಂಥವರಿಗೆ ಎಂದು ಜಾಹಿರಾತು ಮಾಡುತ್ತಾರೆ.

ಶ್ರೀ ವೇದಾಂತ ಹೆಬ್ಬಾರ್.—ನಾಲ್ಕು ಜನಕ್ಕೆ ಸಹಾಯ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ತಾವು ಧರ್ಮಕ್ಕೆ ಈ ಕೆಲಸ ಮಾಡಬೇಕಾಗಿಲ್ಲ ಅವರುಗಳು ಸಾಕಷ್ಟು ಓದಿ ಪರಿಶ್ರಮ ಪಡೆದು ಅಲ್ಲಿ ನಿಂತಿದ್ದಾರೆ. ೨೬ ಜನರಲ್ಲಿ ೬ ಜನ ಹರಿಜನರು ಇದ್ದಾರೆ. ೨೬ ಜನರನ್ನು ಖಾಯಂ ಮಾಡುವಂತೆ ಆದೇಶ ಕೊಡಬೇಕೆಂದು ನಾನು ಹೇಳುತ್ತೇನೆ. Otherwise let them appoint according to merit.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗದಂತೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ವಾಸಪದತ್ತ ಸಿಮೆಂಟ್ ಕಾರ್ಖಾನೆಯ ಕೈಸರ್ ಮಿಲ್‌ನಲ್ಲಿ ಕೆಲಸ ಮಾಡುವ ನಾಲ್ಕು ಜನ ಕಾರ್ಮಿಕರು ಅಪಘಾತಕ್ಕೆ ಒಳಪಟ್ಟು ಮೃತಪಟ್ಟಿರುವುದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನನಗಿನ್ನು ನೋಟೀಸು ಬಂದಿಲ್ಲ. ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ರಾಜ್ಯದ ಮೂಲೆ ಮೂಲೆಗಳಿಂದ ಬಂದಿರುವಂಥ ಸುಮಾರು ಹತ್ತು ಸಾವಿರ ಗುತ್ತಿಗೆ ಮೇರೆಗೆ ನೇಮಕಗೊಂಡಿರುವ ಶಿಕ್ಷಕರು ಪ್ರಮುಖವಾಗಿ ಕಾಯಂ ಮಾಡಬೇಕೆಂದು ಬೃಹತ್ ಪ್ರದರ್ಶನ ನಡೆಸಿರುವ ಬಗ್ಗೆ ಶಿಕ್ಷಣ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್.—ಸ್ವಾಮಿ, ಈ ವಿಷಯವನ್ನು ಸೋಮವಾರಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಸೋಮವಾರ ಹೇಳಿಕೆ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ಇದು ತುಂಬಾ ಗಂಭೀರವಾದಂಥ ಸಂಗತಿ. ಖಾಯಂ ಮಾಡುತ್ತಾರೆಂದು ಅವರೆಲ್ಲರೂ ಬೆಂಗಳೂರಿನಲ್ಲಿಯೇ ಉಳಿದುಕೊಂಡಿದ್ದಾರೆ. ಅಧಿಕೃತವಾಗಿ ಒಂದು ಹೇಳಿಕೆ ಕೊಟ್ಟರೆ ಅವರಿಗೆ ನೆಮ್ಮದಿಯಾಗುತ್ತದೆ.

ನಿಯಮ ೩೩೫ರ ಮೇರೆಗೆ

(೧) ಎ. ಎನ್. ಸಿ. ಸಪ್ಲೈ ಡಿಪೋದಲ್ಲಿ ಕೆಲಸ ಮಾಡುತ್ತಿರುವ ಹುಲಿಯಪ್ಪ ಎನ್ನುವ ನೌಕರನನ್ನು ಪೋಲೀಸರು ಲಾಕಪ್‌ಗೆ ಹಾಕಿರುವುದು

ಶ್ರೀ ಬಿ. ರಾಜಗೌಡ.—ಮಾನ್ಯ ಅಧ್ಯಕ್ಷರೇ, ಹುಲಿಯಪ್ಪ ಎಂಬುವರು ಬೆಂಗಳೂರಿನ ೫೬, ಕಂಪನಿ ಎ.ಎನ್.ಸಿ. ಸಪ್ಲೈ ಡಿಪೋನಲ್ಲಿ ಒಬ್ಬ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ೯-೬-೮೬ರಂದು ತಮ್ಮ ಸ್ನೇಹಿತನಿಂದ ಬಸ್ಸಿನಿಂದ ಇಳಿದು ಹೋಗುತ್ತಿರುವಾಗ ಹನೂರು ಪೋಲೀಸ್ ಠಾಣೆಯ ಇಬ್ಬರು ಪೋಲೀಸಿನವರು ನಿನ್ನ ಮೇಲೆ ಕೇಸಿದೆ, ಪೋಲೀಸ್ ಸ್ಟೇಷನ್‌ಗೆ ಬರಬೇಕೆಂದು ಬಲಾತ್ಕಾರವಾಗಿ ಎಳೆದು ಪೋಲೀಸ್ ವ್ಯಾನಿನಲ್ಲಿ ಹಾಕಿಕೊಂಡು ಹನೂರು ಪೋಲೀಸ್